ಒಬ್ಬ ಕೃತಿಕಾರನಿಗೆ ಬರೆಯುವಾಗ ಅವನಿಗೆ ಆ ಕೃತಿ ಸಿಗ್ತದಲ್ಲಾ, ಅದಕ್ಕಿಂತ ದೊಡ್ಡ ಪ್ರಶಸ್ತಿ ಬೇರೆ ಇಲ್ಲ. ಅವನ ಕೃತಿಯಿಂದ ಅವನಿಗೆ ಏನೇನು ಸಿಗಬೇಕೋ ಅದು ಬರೆಯುವಾಗಲೇ ಸಿಕ್ಕುಹೋಗಿರುತ್ತದೆ. ಅದಕ್ಕಿಂತ ಮಿಗಿಲಾದದ್ದು ಏನೂ ಇಲ್ಲ.

ನನಗೆ ಬೆಂಗಳೂರು ತುಂಬ ಇಷ್ಟ. ಇಷ್ಟವಿಲ್ಲದಿದ್ದರೆ ನನಗೆ ಬೆಂಗಳೂರಿನಲ್ಲಿ ಉಳಿಯಲೇಬೇಕಾದ ಅಗತ್ಯ ಕೂಡ ಇರಲಿಲ್ಲ. ನಾನು ಬೆಂಗಳೂರಿಗೆ ಕಾಲಿಟ್ಟಿದ್ದು ಒಬ್ಬ ನಿರುದ್ಯೋಗಿಯಾಗಿ. ಆಗ ನನಗೆ ಬೆಂಗಳೂರನ್ನು ಬಿಟ್ಟುಹೋಗಲಿಕ್ಕೆ ಬಹಳ ಕಾರಣಗಳಿದ್ದವು. ಆಗ ನನ್ನ ಬಾಳ ಸಂಗಾತಿ ಸ್ಮಿತಾ ನನಗೆ 'ನೀನೊಬ್ಬ ಕನ್ನಡ ಲೇಖಕ. ಇದು ಕನ್ನಡದ ಜಾಗ. ಇಲ್ಲಿಂದ ಗೋಕರ್ಣಕ್ಕೂ ಹತ್ತಿರವಿದೆ. ನಾವು ಇಲ್ಲೇ ಇರೋಣ. ಏನಾದ್ರೂ ಆಗ್ತದೆ' ಎಂದು ಹೇಳಿದಳು. ಅವಳು ಕೊಟ್ಟ ಧೈರ್ಯದ ಮೇಲೆ ಇಲ್ಲಿ ಮುಂದುವರಿದೆ. ಇಲ್ಲಿ ಇರುವಾಗ ನಾನು ಕೈಗೊಂಡಷ್ಟು ಬೇರೆ ಬೇರೆ ಬಗೆಯ ಕೆಲಸವನ್ನು ಇನ್ನೆಲ್ಲಿಯೂ ಮಾಡಿಲ್ಲ. ಬೆಂಗಳೂರಿಗೆ ಬಂದ ಮೇಲೆಯೇ ನನಗೆ ನಾನೇ ಪೂರ್ಣ ಜವಾಬ್ದಾರನಾಗಿದ್ದು. ಅಂದರೆ ಹವ್ಯಾಸಿ ಬರಹಗಾರನಾಗಬೇಕಾಯ್ತು. ನಾನಾ ಸಾಹಸಗಳನ್ನು ಮಾಡಿದೆ. ಬೆಂಗಳೂರಿನ ಅಧ್ಯಾಯ ನನ್ನನ್ನು ಪೂರ್ತಿ ಒರೆಗೆ ಹಚ್ಚಿ ನೋಡಿ, ಹೊಸ ಹೊಸ ಕೌಶಲಗಳಿಗೆ ನನ್ನನ್ನು ಸಜ್ಜುಮಾಡಿದೆ. ಈ ಋಣ ಬಹಳ ಇದೆ. ಥಟ್ ಅಂತ ಬರೆದು ರಸೀದಿ ಕೊಡುವಂಥದ್ದಲ್ಲ. ಅದು ತಾನಾಗಿ ಪ್ರಕಟಗೊಳ್ಳುವ ಗಳಿಗೆಗಾಗಿ ನಾನೂ ಕಾಯುತ್ತಿದ್ದೇನೆ.

◆ **ಬಹುತೇಕ ಎಲ್ಲ ಸಾಹಿತ್ಯ ಪ್ರಕಾರದಲ್ಲಿಯೂ ಕೃಷಿ ಮಾಡಿರುವ ನೀವು ಕಾದಂಬರಿ ಪ್ರಕಾರವನ್ನು ಮಾತ್ರ ಮುಟ್ಟಲಿಕ್ಕೆ ಹೋಗಿಲ್ಲವಲ್ಲ?**

ಒಂದೆರಡು ಸಲ ಮುಟ್ಟಿದೆ; ಶಾಕ್ ಹೊಡೀತು! ಹ್ಹ ಹ್ಹಾ...

ನಾನು ಸ್ವಲ್ಪ ಗಡಿಬಿಡಿ ಮನುಷ್ಯ. ರೆಸ್ಟ್‌ಲೆಸ್. ಮೊದಲಿನಿಂದಲೂ ಹೀಗೆಯೇ. ಮತ್ತೆ ನಾನು ಹಂಚಿಕೊಳ್ಳಲು ಅವಸರಗೊಳಿಸುವ ಮನುಷ್ಯ. ನನಗೇನಾದ್ರೂ ಹೊಳೆದರೆ ಯಾರ ಜತೆಗಾದರೂ ಹಂಚಿಕೊಳ್ಳಬೇಕು ಎಂದು ಚಡಪಡಿಕೆಯಾಗುತ್ತದೆ. ಒಂದು ಕಾದಂಬರಿ ಎಂದರೆ ಎರಡೆರಡು ವರ್ಷ ನೀವು ಬರೆದಿದ್ದನ್ನು ಯಾರಿಗೂ ಹಂಚಿಕೊಳ್ಳದೆ ನಿಮ್ಮ ಪಾಡಿಗೇ ಇಟ್ಟುಕೊಳ್ಳಬೇಕು. ಇಸ್ಪೀಟ್ ಆಡುವವರು ಕಾರ್ಡುಗಳನ್ನು ಎದೆಗೆ ಸಮೀಪ ಇಟ್ಟುಕೊಳ್ಳುವಂತೆ.

ಕಾದಂಬರಿ ಎನ್ನುವುದು ಸಣ್ಣಕಥೆಯ ವಿಸ್ತರಣೆ ಅಲ್ಲ. ಅದಕ್ಕೆ ಬೇರೆಯೇ ಒಂದು ಕೌಶಲ ಬೇಕು. ಅದು ಜಡೆ ಹೆಣೆದ ಹಾಗೆ. ಒಂದು ಕಾದಂಬರಿಯಲ್ಲಿ ಮೂರು ಎಳೆಗಳಿರುತ್ತವೆ ಎಂದುಕೊಳ್ಳಿ. ಮೂರೂ ಎಳೆಗಳನ್ನೂ ಒಟ್ಟಿಗೇ ಹೇಳಲಾಗುವುದಿಲ್ಲ. ಯಾವುದೋ ಒಂದು ಎಳೆಯನ್ನು ಹಿಡಿದುಕೊಂಡು ಹೋಗುತ್ತೇವೆ. ಆದರೆ ಮೂರು ಎಳೆಗಳು ಸಂಧಿಸುವ ಬಿಂದುವಿನಲ್ಲಿ ಉಳಿದೆರಡು ಎಳೆಗಳೂ ಪರೋಕ್ಷವಾಗಿಯೇ ಮುಂದುವರಿದಿರಬೇಕು. ಮೂರೂ ಎಳೆಗಳಿಗೆ ಚಲನೆಯಿರಬೇಕು. ಇದೊಂದು ಸಾಮೂಹಿಕ ವಿವಾಹದಂತೆ. ಅಗಾಧವಾದ ಕುಟುಂಬವೊಂದರ ಉಸ್ತುವಾರಿ ಕಲೆ ಬೇಕು. ಈ ಪಾತ್ರ ನಂಗೆ ಇಷ್ಟ ಇದೆ; ಇದರ ಬಗ್ಗೆ ಮಾತ್ರ ಬರೆಯುತ್ತೇನೆ ಎನ್ನುವ ಹಾಗಿಲ್ಲ. ಅಲ್ಲಿ ಬರುವ ಪ್ರತಿಯೊಂದು ಕ್ರಿಮಿ ಕೀಟಗಳಿಂದ ಹಿಡಿದು, ಮನೆಗೆ ತೂಗು ಹಾಕಿದ ಚಿಬ್ಬೆಯವರೆಗೆ ಎಲ್ಲವೂ ಪ್ರಿಯವಾಗಿರಬೇಕು. ಅದಕ್ಕೆ ಬೇಕಾದ ಟೆಂಪರ್‌ಮೆಂಟ್ ನನಗಿಲ್ಲ. ಆದರೆ ಅದನ್ನೊಮ್ಮೆ ಮಾಡಬೇಕು ಎಂಬ ಆಸೆ ಇದೆ. ನಾನು ಸರಿಹೋಗಬೇಕು ಅಂದರೆ ಏನಾದ್ರೂ ಟ್ರೀಟ್‌ಮೆಂಟ್ ಮಾಡಬೇಕಲ್ಲ! ಒಂದು ಕಾದಂಬರಿ ಬರೆದರೆ ನಾನು ಸರಿಹೋಗಬಹುದೇನೋ.

❖